(ಭಾರೀ ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನು ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿಲ್ಲ.....

(ಗೊಂದಲ)

(ಮಾನ್ಯ ಸಿಂಧ್ಯರವರು ಸಭಾತ್ಯಾಗ ಮಾಡಿದರು)

(ಆಡಳಿತ ಪಕ್ಷ ಸದಸ್ಯರು ಷೇಂ ಷೇಂ ಎಂದು ಕೂಗುತ್ತಿದ್ದರು)

ಅಧ್ಯಕ್ಷರು:- ಮಾನ್ಯ ಸಂಸದೀಯ ಸಚಿವರು ಮತ್ತು ಮಾನ್ಯ ಶಿಕ್ಷಣ ಸಚಿವರು ಏನು ಕ್ರಿಯಾಲೋಪ ಎತ್ತಿದರು ಆ ಕ್ರಿಯಾಲೋಪವನ್ನು ನಾನು ಎತ್ತಿಹಿಡಿದಿದ್ದೇನೆ. 68,69,80ನೇ ವಿಧಿನಿಯಮದ ಆಡಿಯಲ್ಲಿ ಚರ್ಚೆ ಪ್ರಾರಂಭವಾಗುವ ಮುನ್ನ ಯಾವುದೇ ಸದಸ್ಯರು ಯಾವುದೇ ಹೇಳಿಕೆಯನ್ನು ಕೊಡಲು ಸಾಧ್ಯವಿಲ್ಲ; ಹಾಗೆ ಕೊಟ್ಟರೂ ಅದು ಸದನದ ಕಾರ್ಯಕಲಾಪಗಳ ಕಡತಕ್ಕೆ ಹೋಗುವುದಿಲ್ಲ. ಈ ರೂಲಿಂಗ್ ಎಲ್ಲ ಕಾಲಕ್ಕೂ, ಎಲ್ಲ ಸನ್ನಿವೇಶಕ್ಕೂ ಅನ್ವಯಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಮಾನಕ್ಕೆ ನನ್ನದೇನು ವಿರೋಧವಿಲ್ಲ. ಆದರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ವಿರೋಧ ಪಕ್ಷ ನಾಯಕರನ್ನು ಕರೆದು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ. ಅದು ರೆಕಾರ್ಡಿಗೆ ಹೋಗುತ್ತದೆಯೇ? ಅದನ್ನು ಕೇಳುವುದಕ್ಕೂ ನನಗೆ ಅಧಿಕಾರ ಇಲ್ಲವೆ? ಪ್ರಾರಂಭದಲ್ಲಿ ತಾವು ವಿರೋಧ ಪಕ್ಷದ ನಾಯಕರನ್ನು ಕರೆದಿರಿ. ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಶುರು ಮಾಡಿದರು. ಅರ್ಧ ಮಾಡಿದ ನಂತರ ಗೊಂದಲ ಶುರುವಾಯಿತು. ಅಬ್ಜಕ್ಷನ್ ಮಾಡಿದರು. ತಾವು ಮಾತನಾಡುವುದಕ್ಕೆ ಅನುಮತಿ ಕೊಟ್ಟದ್ದು ರೆಕಾರ್ಡಿಗೆ ಹೋಗಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಯಡಿಯೂರಪ್ಪನವರಿಗೆ ನನ್ನ ಅಭಿನಂದನೆಗಳು, ವಂದನೆಗಳು. ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಅವರನ್ನು ಕರೆದೆ. ಆದರೆ ಅವರು ಸುಪ್ರೀಂ ಕೋರ್ಟಿನ ಉಲ್ಲೇಖ ಮಾಡಿ ಅವರ the tone and tenor of the statement which the Leader of the Opposition was about to make, I could make out. He was ultimately trying to question the ruling which I had given. Then he was trying to circumvent rules 68,69 and 70 of the Rules of Procedure. I upheld the point of order. When I uphold the point of order, naturally I don't approve of....

ನಿಯಮ 68ರ ಮೇರೆಗೆ

ಬೆಂಗಳೂರಿನ ಹೊಸೂರು ಸರ್ಜಾಪುರದಲ್ಲಿರುವ 110 ಎಕರೆ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನಿವಾಸಿ ಭಾರತೀಯರಿಗೆ ಮಂಜೂರು ಮಾಡಿದ ಹಿನ್ನೆಲೆಯಲ್ಲಿ ನೇಮಿಸಲಾದ ನ್ಯಾಯಮೂರ್ತಿ ಕುಲದೀಪ್‌ಸಿಂಗ್ ವಿಚಾರಣಾ ಆಯೋಗದ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸುವುದು.

† ಶ್ರೀ ಕಾಗೋಡುತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಮುಂದಿರತಕ್ಕ ಪ್ರಸ್ತಾವನೆ ಅತ್ಯಂತ ಪ್ರಮುಖವಾದ ಪ್ರಸ್ತಾವನೆ. ನನಗೆ ಈಗಲೂ ಆಶ್ಚರ್ಯ ಅನ್ನಿಸುತ್ತದೆ, ಇಂಥ ಒಂದು ಪ್ರಮುಖವಾದ ವಿಷಯವನ್ನು ಚರ್ಚೆ ಮಾಡಬೇಕು. ನಮ್ಮ ಅಭಿಪ್ರಾಯವನ್ನು ಹೇಳಬೇಕು, ಈ ಸದನದ ಅಭಿಪ್ರಾಯವನ್ನು ಕೇಳಬೇಕು ಎನ್ನುವ ಸಹನೆ, ಸೌಜನ್ಯ ನಮ್ಮ ವಿರೋಧಪಕ್ಷದವರಿಗೆ